**ಮೊದಲನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,**

**ಕನಕಪುರ.**

**ಸಿಸಿ ನಂ.821/2018**

ಪಿರ್ಯಾದುದಾರರು ಃ ಕೋಡಿಹಳ್ಳಿ ಪೊಲೀಸ್ ಠಾಣೆ

– ವಿರುದ್ಧ –

ಆರೋಪಿತರಾದ ಃ 1. ಪ್ರವೀಣ್ ಬಿನ್ ಸಿದ್ದಯ್ಯ
23 ವರ್ಷ
ಮಸೀದಿ ಹಿಂಭಾಗ
ಮೇಳೆಕೋಟೆ
ಕನಕಪುರ ತಾಲ್ಲೂಕು

3. ಗುರಪ್ಪ ಬಿನ್ ಈರಪ್ಪ
35 ವರ್ಷ
ಚಿಕ್ಕೇನಹಳ್ಳಿ ಗ್ರಾಮ
ಆನೇಕಲ್ ತಾಲ್ಲೂಕು

:: **ದೋಷಾರೋಪಣೆ** ::

**ಶ್ರೀಮತಿ. ಲತಾಶ್ರೀ ಬಿ.ವಿ., ಬಿ.ಎ.ಎಲ್.,ಎಲ್.ಬಿ ಒಂದನೇ ಅಪರ ನ್ಯಾಯಿಕ ದಂಡಾಧಿಕಾರಿಗಳು, ಕನಕಪುರ, ಆದ ನಾನು ನಿಮ್ಮ ಮೇಲೆ ದೋಷಾರೋಪಣೆ ಏನೆಂದರೆ:-**

ದಿನಾಂಕ 23.01.2015 ರಂದು ಮಧ್ಯಾಹ್ನ 13-30 ಗಂಟೆಯಲ್ಲಿ ಮಾನ್ಯ ನ್ಯಾಯಾಲಯದ ವ್ಯಾಪ್ತಿ ಕೋಡಿಹಳ್ಳಿ ಪೊಲೀಸ್ ಠಾಣೆ ಸರಹದ್ದು, ಯಕ್ಕುಳ್ಳಿ ಗ್ರಾಮದ ಬಳಿ 1 ಮತ್ತು 2ನೇ ಆರೋಪಿಗಳಾದ ನೀವುಗಳು ಮೋಟಾರ್ ಸೈಕಲ್ ನಂಬರ್ KA Á2 Q 4718 ರಲ್ಲಿ ಒಂಟಿ ಮಹಿಳೆಯರಿಂದ ಬಂಗಾರದ ವಡವೆಗಳನ್ನು ಸುಲಿಗೆ ಮಾಡಲು ಹೊಂಚುಹಾಕುತ್ತಿರುವಾಗ, ಯಕ್ಕುಳಿ ಗ್ರಾಮದ ಚಾಸಾ-1 ತಿಮ್ಮೇಗೌಡ ರವರ ಮನೆಯ ಮುಂದೆ ಚಾಸಾ-2 ಪಾರ್ವತಮ್ಮ ರವರು ಒಬ್ಬರೇ ಕುಳಿತಿರುವುದನ್ನು ಕಂಡು ಚಾಸಾ-2 ರವರ ಬಳಿ ಹೋಗಿ ಕುಡಿಯಲು ನೀರು ಕೇಳುವ ಸೋಗಿನಲಿ ನೀರನ್ನು ಕೇಳಿ, ನೀರನ್ನು ಕುಡಿದ ಮೇಲೆ ಚಾಸಾ-2 ರವರ ಕುತ್ತಿಗೆಗೆ ಕೈ ಹಾಕಿ 2 ಎಳೆ ಮಾಂಗಲ್ಯದ ಸರವನ್ನು ಕೀಳಲು ಪ್ರಯತ್ನಿಸಿದಾಗ ಚಾಸಾ-2 ರವರು ಚೈನನ್ನು ಗಟ್ಟಿಯಾಗಿ ಕೈಯಲ್ಲಿ ಹಿಡಿದ ಪರಿಣಾಮ ಸುಮಾರು 22 ಗ್ರಾಂ 9 ಮಿಲಿ ತೂಕದ ಅರ್ದ ಮಾಂಗಲ್ಯದ ಚೈನನ್ನು ಕಿತ್ತುಕೊಂಡು ಹೋಗಿ 2ನೇ ಆರೋಪಿ ಸಿದ್ಧಪಡಿಸಿಕೊಂಡು ನಿಲ್ಲಿಸಿದ್ದ ಮೋಟಾರ್ ಸೈಕಲ್ ನಂಬರ್ KA 42 Q 4718ರಲ್ಲಿ ಪರಾರಿಯಾಗಿದ್ದಲ್ಲದೇ ಸದರಿ ವಡವೆಯನ್ನು 3ನೇ ಆರೋಪಿಯ ಹೆಸರಿನಲ್ಲಿ ಆನೇಕಲ್ ಬ್ರಾಂಚ್ ಮಣಪ್ಪರಂ ಗೋಲ್ಡ್ ಲೋನ್ ಕಛೇರಿಯಲ್ಲಿ ಅಡವಿಟ್ಟು ಬಂದ ಹಣವನ್ನು ಆರೋಪಿಗಳಾದ ನೀವುಗಳು ಹಂಚಿಕೊಂಡು ಖರ್ಚು ಮಾಡಿಕೊಂಡಿದ್ದು, ಇದು ಭಾರತೀಯ ದಂಡ ಸಂಹಿತೆ ಕಲಂ 392 ಸಹವಾಚಕ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 13.11.2025 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ

**1ನೇ ಆರೋಪಿಯ ಹೇಳಿಕೆ**

ಪ್ರಶ್ನೆ-1 ಇದೀಗ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ-

ಪ್ರಶ್ನೆ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬಯಸುವಿರಾ?

ಉತ್ತರಃ-

(ದಿನಾಂಕಃ 13.11.2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಡೀಕರಿಸಿದೆ.)

**ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ**
**ನ್ಯಾಯಾಲಯ, ಕನಕಪುರ**

ಆರೋಪಿಯ ಸಹಿ :

**3ನೇ ಆರೋಪಿಯ ಹೇಳಿಕೆ**

ಪ್ರಶ್ನೆ-1 ಇದೀಗ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ-

ಪ್ರಶ್ನೆ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬಯಸುವಿರಾ?

ಉತ್ತರಃ-

(ದಿನಾಂಕಃ 13.11.2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಡೀಕರಿಸಿದೆ.)

**ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ**
**ನ್ಯಾಯಾಲಯ, ಕನಕಪುರ**

ಆರೋಪಿಯ ಸಹಿ :